KABC030921172017

SANJEEVKUMAR S HINDODDI

Digitally signed by SANJEEVKUMAR S HINDODDI
Date: 2026.07.03 17:49:14 +0530

Presented on : 21-08-2017
Registered on : 21-08-2017
Decided on : 03-07-2026
Duration : 8 years, 10 months, 13 days

**31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**
**ಬೆಂಗಳೂರು ನಗರ**

ಉಪಸ್ಥಿತರು
**ಸಂಜೀವ್ ಕುಮಾರ್.ಎಸ್. ಹಿಂದೊಡ್ಡಿ**
ಬಿ.ಕಾಂ. ಎಲ್‌ಎಲ್. ಎಂ.,
31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿ,
ಬೆಂಗಳೂರು ನಗರ

**ದಿನಾಂಕ 03ನೇ ಜುಲೈ 2026**

**ಸಿಸಿ ಸಂಖ್ಯೆ–21204/2017**

**ಫಿರ್ಯಾದುದಾರರು–** ರಾಜ್ಯದ ಪರ ರಾಜಗೋಪಾಲನಗರ
ಪೊಲೀಸ್ ಠಾಣೆ, ಬೆಂಗಳೂರು

(ಹಿ.ಸ.ಸ. ಅಭಿಯೋಜಕರು)

**– ವಿರುದ್ಧ –**

**ಆರೋಪಿತರು**–

1. ರವಿ (ಅ) ಅಂದ್ರಹಳ್ಳಿರವಿ ಬಿನ್ ಅಶೋಕ್, 21 ವರ್ಷ,
ನಂ.603, 3ನೇ ಕ್ರಾಸ್, ನಾಗರಹೊಳೆ ಸರ್ಕಲ್,
ಚಾಮುಂಡೇಶ್ವರಿ ದೇವಸ್ಥಾನದ ಹಿಂಭಾಗ,
ಮಾದೇಶ್ವರ ನಗರ, ಬೆಂಗಳೂರು.

2. ಲೋಕೇಶ್ ಬಿನ್ ಸೋಮಾಚಾರಿ, 22 ವರ್ಷ,
ನಂ.48, 2ನೇ ಕ್ರಾಸ್, ಸಾಯಿಬಾಬಾ ದೇವಸ್ಥಾನದ
ಹಿಂಭಾಗ, ಅಂಕದ್ರಹಳ್ಳಿ, ಬೆಂಗಳೂರು.

(ಶ್ರೀ ಮರಿಲಿಂಗ.ಎಂ., ವಕೀಲರು)

| | | |
|---|---|---|
| ಅಪರಾಧದ ದಿನಾಂಕ | – | 11-07-2016 |
| ಫಿರ್ಯಾದು ಮಾಡಲಾದ ಅಪರಾಧಗಳು | – | ಭಾ.ದಂ.ಸಂ. ಕಲಂ 324, 504, 506 |
| ಆರೋಪಿತರು ಆರೋಪಗಳನ್ನು ಒಪ್ಪಿಕೊಂಡಿದ್ದಾರೆಯೇ | – | ಇಲ್ಲ |
| ಅಂತಿಮ ಆದೇಶ | – | ಆರೋಪಿತರನ್ನು ಬಿಡುಗಡೆಗೊಳಿಸಿದೆ |
| ತೀರ್ಪಿನ ದಿನಾಂಕ | – | 03-07-2026 |

**- ತೀರ್ಪು -**

ಬೆಂಗಳೂರು ನಗರ, ರಾಜಗೋಪಾಲನಗರ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ಭಾ.ದಂ.ಸಂ. ಕಲಂ 324, 504, 506 ಸಹ ವಾಚಕ 34ರ ದಂಡನೀಯ ಅಪರಾಧಗಳಿಗಾಗಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನೆ ಪ್ರಕರಣವು ಈ ಕೆಳಕಂಡಂತಿರುತ್ತದೆಃ

ದಿನಾಂಕ 11-07-2016 ರಂದು ರಾತ್ರಿ 9.00 ಗಂಟೆಯಲ್ಲಿ ಚಾಸಾ 1 ಚಿಂಪ್ರುಮಾಗ್ ರವರು ಯೂನಿಟೆಕ್ಸ್ ಅಪ್ಪರೆಲ್ಸ್ ಕಂಪನಿಗೆ ಕೆಲಸಕ್ಕೆ ಹೋಗಲು ಅದಕ್ಕೆ 50 ಮೀಟರ್ ಅಂತರದಲ್ಲಿ ಹೋಗುತ್ತಿದ್ದಾಗ ಆರೋಪಿತರು ಬೈಕ್ ನಲ್ಲಿ ಬಂದು ಚಾಸಾ 1 ರವರ ಜೊತೆ ದಾರಿಗೆ ಅಡ್ಡ ಏಕೆ ಬಂದೆ ಎಂದು ಜಗಳ ತೆಗೆದು ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ. ಚಾಸಾ 1 ಮತ್ತು ಆರೋಪಿತರಿಗೆ ಮಾತಿಗೆ ಮಾತು ಬೆಳೆದಾಗ ಬೈಕ್ ಹಿಂದೆ ಕುಳಿತಿದ್ದ 1ನೇ ಆರೋಪಿ ಏಕಾಏಕಿ ಚಾಕುವಿನಿಂದ ಚಾಸಾ 1 ರವರ ಎಡ ಭುಜಕ್ಕೆ ಮತ್ತು ಎದೆಗೆ ತಿಳಿದು ರಕ್ತಗಾಯಪಡಿಸಿರುತ್ತಾರೆ. ಅಲ್ಲದೇ ಆರೋಪಿತರು ಸಾರ್ವಜನಿಕರು ಬರುತ್ತಿದ್ದಂತೆ ಚಾಸಾ 1 ರವರನ್ನು ಕುರಿತು ನಿನಗೊಂದು ಗತಿ

ಕಾಣಿಸುತ್ತೇನೆಂದು ಬೆದರಿಕೆ ಹಾಕಿ ಹೊರಟು ಹೋಗಿದ್ದರೆಂದು ಆರೋಪಿಸಲಾಗಿರುತ್ತದೆ.

3. ತನಿಖಾಧಿಕಾರಿಯವರು ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿ, ನ್ಯಾಯಾಲಯವು ಆಪಾದಿಸಿದ ಅಪರಾಧಗಳಿಗೆ ಸಂಜ್ಞೆ ತೆಗೆದುಕೊಂಡು ಆರೋಪಿತರ ವಿರುದ್ಧ ಜಾ.ರ. ವಾರಂಟ್ ಹೊರಡಿಸಿರುತ್ತದೆ. ನಂತರ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಅವರ ವಕೀಲರ ಮುಖಾಂತರ ಅರ್ಜಿಯನ್ನು ಸಲ್ಲಿಸಿ ಜಾಮೀನು ಪಡೆದಿರುತ್ತಾರೆ.

4. ನ್ಯಾಯಾಲಯವು ಅಭಿಯೋಜನೆ ಪ್ರಕರಣದ ದಾಖಲೆಗಳನ್ನು ಆರೋಪಿತರಿಗೆ ಒದಗಿಸಿ, ಉಭಯ ಪಕ್ಷಕಾರರ ವಾದ ಆಲಿಸಿದ ನಂತರ ಅವರ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ಓದಿ ವಿವರಿಸಲಾಗಿ, ಆರೋಪಿತರು ಅದನ್ನು ನಿರಾಕರಿಸಿ ವಿಚಾರಣೆ ಆಗಬೇಕೆಂದು ಕೋರಿದ ಮೇರೆಗೆ ಪ್ರಕರಣವನ್ನು ವಿಚಾರಣೆಗೆ ನಿಗದಿಪಡಿಸಲಾಗಿರುತ್ತದೆ.

5. ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಅಂತಿಮ ವರದಿಯಲ್ಲಿ ತೋರಿಸಲಾದ 13 ಸಾಕ್ಷಿದಾರರ ಪೈಕಿ ಚಾಸಾ 11 ರವರನ್ನು ಅಸಾ 1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಚಾಸಾ 1 ಹಾಗೂ ಉಳಿದ

ಸಾಕ್ಷಿದಾರರಿಗೆ ನ್ಯಾಯಾಲಯವು ಹಂತ ಹಂತವಾಗಿ ಸಮನ್ಸ್, ವಾರಂಟ್ ಮತ್ತು ಉದ್ಘೋಷಣೆಗಳನ್ನು ಹೊರಡಿಸಿದ್ದರೂ ಸಹ ಸಂಬಂಧಿಸಿದವರು ಅವರುಗಳನ್ನು ಕರೆತಂದು ವಿಚಾರಣೆ ಮಾಡುವಲ್ಲಿ ವಿಫಲರಾಗಿರುತ್ತಾರೆ. ಹೀಗಾಗಿ ಅಭಿಯೋಜನೆಯವರ ಮನವಿಯನ್ನು ತಿರಸ್ಕರಿಸಿ, ಉಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಕೈಬಿಟ್ಟು, ಅಭಿಯೋಜನೆ ಸಾಕ್ಷ್ಯವನ್ನು ಮುಕ್ತಾಯಗೊಳಿಸಲಾಗಿದೆ.

**6.** ನಂತರದಲ್ಲಿ ಆರೋಪಿತರ ಹೇಳಿಕೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಂತೆ ದಾಖಲಿಸಿದ್ದು, ಅವರು ಅಭಿಯೋಜನೆ ಸಾಕ್ಷ್ಯವನ್ನು ಅಲ್ಲಗಳೆದಿದ್ದು ತಮ್ಮ ಪರವಾಗಿ ಯಾವುದೇ ಸಾಕ್ಷ್ಯ ಇಲ್ಲ ಎಂದು ಹೇಳಿರುತ್ತಾರೆ.

**7**. ಉಭಯ ಪಕ್ಷಕಾರರ ಪರ ವಾದವನ್ನು ಆಲಿಸಿ, ನ್ಯಾಯಾಲಯದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಮತ್ತು ಕಡತವನ್ನು ಪರಿಶೀಲನೆ ಮಾಡಲಾಗಿ ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿವೆಃ

1) ದಿನಾಂಕ 11-07-2016 ರಂದು ರಾತ್ರಿ 9.00 ಗಂಟೆಯಲ್ಲಿ ಚಾಸಾ 1 ಚಿಂಪ್ರುಮಾಗ್ ರವರು ಯೂನಿಟೆಕ್ಸ್ ಅಪ್ಪರೆಲ್ಸ್ ಕಂಪನಿಗೆ ಕೆಲಸಕ್ಕೆ ಹೋಗಲು ಅದಕ್ಕೆ 50 ಮೀಟರ್ ಅಂತರದಲ್ಲಿ ಹೋಗುತ್ತಿದ್ದಾಗ

ಆರೋಪಿತರು ಬೈಕ್ ನಲ್ಲಿ ಬಂದು ಚಾಸಾ 1 ರವರ ಜೊತೆ ಸಮಾನ ಉದ್ದೇಶದಿಂದ ದಾರಿಗೆ ಅಡ್ಡ ಏಕೆ ಬಂದೆ ಎಂದು ಜಗಳ ತೆಗೆದು ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದು ಅವಮಾನ ಮಾಡಿ ಸಾರ್ವಜನಿಕ ಶಾಂತಿಯನ್ನು ಭಂಗಗೊಳಿಸಲು ಪ್ರಚೋದಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 504 ಸಹ ವಾಚಕ 34ರಡಿ ದಂಡನೀಯವಾದ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತುಪಡಿಸಿದ್ದಾರೆಯೇ?

2) ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಚಾಸಾ 1 ಮತ್ತು ಆರೋಪಿತರಿಗೆ ಮಾತಿಗೆ ಮಾತು ಬೆಳೆದಾಗ ಸಮಾನ ಉದ್ದೇಶವನ್ನು ಮುಂದುವರಿಸಿ ಬೈಕ್ ಹಿಂದೆ ಕುಳಿತಿದ್ದ 1ನೇ ಆರೋಪಿ ಏಕಾಏಕಿ ಚಾಕುವಿನಿಂದ ಚಾಸಾ 1 ರವರ ಎಡ ಭುಜಕ್ಕೆ ಮತ್ತು ಎದೆಗೆ ತಿಳಿದು ರಕ್ತಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 324 ಸಹ ವಾಚಕ 34ರಡಿ ದಂಡನೀಯವಾದ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತುಪಡಿಸಿದ್ದಾರೆಯೇ?

3) ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶವನ್ನು ಮುಂದುವರಿಸಿ ಆರೋಪಿತರು ಸಾರ್ವಜನಿಕರು ಬರುತ್ತಿದ್ದಂತೆ ಚಾಸಾ 1 ರವರನ್ನು ಕುರಿತು ನಿನಗೊಂದು ಗತಿ ಕಾಣಿಸುತ್ತೇನೆಂದು ಬೆದರಿಕೆ ಹಾಕಿ ಹೊರಟು ಹೋಗಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 506 ಸಹ ವಾಚಕ 34ರಡಿ ದಂಡನೀಯವಾದ

ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತುಪಡಿಸಿದ್ದಾರೆಯೇ?

4) ಏನು ಆದೇಶ?

8. ಅಭಿಯೋಜನೆಯವರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಗಳನ್ನು ಕೆಳಗೆ ಹೇಳಲಾದ ಕಾರಣಗಳಿಗಾಗಿ ಈ ಮುಂದಿನಂತೆ ಉತ್ತರಿಸುತ್ತೇನೆ.

ಅಂಶ 1 ರಿಂದ 3 : ನಕಾರಾತ್ಮಕವಾಗಿ

ಅಂಶ 4 : ಅಂತಿಮ ಆದೇಶದಂತೆ

**ಕಾ ರ ಣ ಗ ಳು**

**ಅಂಶ-1 ರಿಂದ 4:**

9. ಈ ಎಲ್ಲಾ ಅಂಶಗಳು ಒಂದಕ್ಕೊಂದು ಹೊಂದಿಕೊಂಡಿರುವುದರಿಂದ, ಅವುಗಳಿಗೆ ಸಂಬಂಧಿಸಿದ ಸಂಗತಿ ಮತ್ತು ಸಾಕ್ಷ್ಯದ ಪುನರಾವರ್ತನೆಯನ್ನು ತಡೆಗಟ್ಟುವ ಸಲುವಾಗಿ ಅವುಗಳ ಚರ್ಚೆಯನ್ನು ಒಟ್ಟಾಗಿ ತೆಗೆದುಕೊಳ್ಳಲಾಗಿದೆ.

10. ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಭಾಗಶಃ ತನಿಖಾಧಿಕಾರಿಯನ್ನು ಅಸಾ 1 ಎಂದು ವಿಚಾರಣೆಗೆ ಒಳಪಡಿಸಿದ್ದಾರೆ.

ಅಸಾ 1 ಸಂತೋಷರಾಮ್, ರಾಜಗೋಪಾಲ ನಗರ ಪೊಲೀಸ್ ಠಾಣೆಯ ಅಂದಿನ ಆರಕ್ಷಕ ಉಪ ನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25-07-2016 ರಂದು ಬೇರೆ ಮೊಕದ್ದಮೆಯಲ್ಲಿ 1 ಮತ್ತು 2ನೇ ಆರೋಪಿತರನ್ನು ವಿಚಾರಣೆ ಮಾಡಿದಾಗ ಅವರು ಪ್ರಸ್ತುತ ಪ್ರಕರಣದಲ್ಲಿನ ಚಾಸಾ 1 ರವರಿಗೆ ಹಲ್ಲೆ ಮಾಡಿರುವುದಾಗಿ ಹೇಳಿಕೆಯಲ್ಲಿ ತಿಳಿಸಿದ್ದರು ಎಂದಿದ್ದಾರೆ. ಚಾಸಾ 13 ರವರಿಂದ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿ ಚಾಸಾ 1 ರವರನ್ನು ಠಾಣೆಗೆ ಕರೆಸಿ ಆರೋಪಿತರನ್ನು ಗುರುತಿಸಿದ ಬಗ್ಗೆ ಅವರ ಮರುಹೇಳಿಕೆ ಪಡೆದುಕೊಂಡಿರುತ್ತೇನೆಂದು, ಚಾಸಾ 6 ರವರಿಂದ ವರದಿ, ಚಾಸಾ 7 ಮತ್ತು 8 ರವರ ಹೇಳಿಕೆ ಪಡೆದುಕೊಂಡಿದ್ದಾಗಿ, ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 13 ರವರಿಗೆ ವಹಿಸಿಕೊಟ್ಟಿರುತ್ತೇನೆಂದು ನುಡಿಯುತ್ತಾ ನ್ಯಾಯಾಲಯದ ಮುಂದಿದ್ದ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಅಸಾ 1 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ.

**11**. ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿರುತ್ತೇನೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಈ ಪ್ರಕರಣದಲ್ಲಿ ಆರೋಪಿತರಿಂದ ಹಲ್ಲೆಗೊಳಪಟ್ಟ ಚಾಸಾ 1, ಪ್ರತ್ಯಕ್ಷದರ್ಶಿಗಳು ಮತ್ತು ವೈದ್ಯಾಧಿಕಾರಿಯ ಸಾಕ್ಷ್ಯವು ಪ್ರಮುಖವಾಗಿರುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ

ಅಂಶವೇನೆಂದರೆ ನ್ಯಾಯಾಲಯವು ಚಾಸಾ 1, ಪ್ರತ್ಯಕ್ಷದರ್ಶಿಗಳು, ವೈದ್ಯಾಧಿಕಾರಿ ಮತ್ತು ಇತರೆ ಸಾಕ್ಷಿದಾರರಿಗೆ ನ್ಯಾಯಾಲಯವು ಹಂತ ಹಂತವಾಗಿ ಸಮನ್ಸ್ ವಾರಂಟ್ ಮತ್ತು ಉದ್ಘೋಷಣೆಗಳನ್ನು ಹೊರಡಿಸಿದ್ದರೂ ಸಹ ಸಂಬಂಧಿಸಿದವರು ಅವರುಗಳನ್ನು ನ್ಯಾಯಾಲಯಕ್ಕೆ ಕರೆತಂದು ವಿಚಾರಣೆ ಮಾಡಿಸುವಲ್ಲಿ ವಿಫಲರಾಗಿರುತ್ತಾರೆ. ನ್ಯಾಯಾಲಯದ ಅಭಿಪ್ರಾಯದಲ್ಲಿ ಇದು ಅಭಿಯೋಜನೆ ಪ್ರಕರಣಕ್ಕೆ ಮಾರಕವಾಗಿರುತ್ತದೆ.

**12**. ಭಾಗಶಃ ತನಿಖಾಧಿಕಾರಿಯಾದ ಅಸಾ 1 ರವರು ಪ್ರಕರಣದಲ್ಲಿ ತಾವು ಕೈಗೊಂಡ ಪಾತ್ರವನ್ನು ನುಡಿದಿರುತ್ತಾರೆ. ಆದರೆ ಫಿರ್ಯಾದಿಯಾದ ಚಾಸಾ 1, ಪ್ರತ್ಯಕ್ಷದರ್ಶಿಗಳು, ವೈದ್ಯಾಧಿಕಾರಿ ಮತ್ತು ಇತರೆ ಸಾಕ್ಷಿದಾರರ ಸಾಕ್ಷ್ಯವು ನ್ಯಾಯಾಲಯಕ್ಕೆ ಲಭ್ಯವಿಲ್ಲವಾದ ಕಾರಣ ಅಸಾ 1 ರವರ ಸಾಕ್ಷ್ಯವು ಅಭಿಯೋಜನೆಗೆ ಉಪಯುಕ್ತವಾಗುವುದಿಲ್ಲ ಎಂದೇ ಹೇಳಬೇಕಾಗುತ್ತದೆ. ಒಟ್ಟಾರೆಯಾಗಿ ಹೇಳಬೇಕೆಂದರೆ, ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಿಸಲಾದ ಅಪರಾಧವನ್ನು ಪುಷ್ಠೀಕರಿಸುವಂತಹ ಪೂರಕವಾದ ಸಾಕ್ಷ್ಯಾಧಾರಗಳನ್ನು ಪೂರೈಸಿರುವುದಿಲ್ಲ. ಆದ್ದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧ ತಮ್ಮ ಪ್ರಕರಣವನ್ನು ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲವಾಗಿದ್ದು, ಕಾನೂನಿನಲ್ಲಿ ಇತ್ಯರ್ಥವಾದ ತತ್ವಗಳ

ಪ್ರಕಾರ ಅವರಿಗೆ ಸಂಶಯದ ಲಾಭ ನೀಡಿ, ಮೇಲಿನ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

**ಅಂಶ-4:**

**13**. ಮೇಲಿನ ಅಂಶಗಳಿಗೆ ನೀಡಿದ ಉತ್ತರದಿಂದಾಗಿ, ಈ ಕೆಳಕಂಡಂತೆ ಮಾಡುವ-

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮೇರೆಗೆ 1 ಮತ್ತು 2ನೇ ಆರೋಪಿತರನ್ನು ಅವರ ವಿರುದ್ಧ ಆರೋಪಿಸಲಾದ ಭಾ.ದಂ.ಸಂ. ಕಲಂ 324, 504, 506 ಸಹ ವಾಚಕ 34ರ ದಂಡನೀಯವಾದ ಅಪರಾಧಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆ-ಗೊಳಿಸಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಪ್ರಕಾರ ಆರೋಪಿತರ ಪರ ಬರೆದು ಕೊಟ್ಟಿರುವ

ಜಾಮೀನು ಮುಚ್ಚಳಿಕೆಗಳು ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

ಮೇಲ್ಮನವಿ ಅವಧಿ ಮುಗಿದ ನಂತರ ಸ್ವತು ಪಟ್ಟಿ ಸಂ.197/2016ರಲ್ಲಿ ತೋರಿಸಲಾದ ಚಾಕುವನ್ನು ನಾಶಪಡಿಸುವುದು.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ಅಳವಡಿಸುವಂತೆ ಉಕ್ತಲೇಖನ ಕೊಟ್ಟಿದ್ದು ಅವರು ಅದನ್ನು ಗಣಕಯಂತ್ರಕ್ಕೆ ಅಳವಡಿಸಿ, ತೆಗೆದುಕೊಟ್ಟ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ ದಿನಾಂಕ 03-07-2026ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ)

**(ಸಂಜೀವ್ ಕುಮಾರ್.ಎಸ್. ಹಿಂದೊಡ್ಡಿ)**
**31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ.**

**ಅ ನು ಬಂ ಧ**

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ**

ಅಸಾ 1 – ಸಂತೋಷರಾಮ್

**ಅಭಿಯೋಜನೆ ಪರ ಗುರುತಿಸಲಾದ ನಿಶಾನೆಃ**

ಇಲ್ಲ

**ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಃ**

ಇಲ್ಲ

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ**

ಇಲ್ಲ

**ಆರೋಪಿತರ ಪರ ಗುರುತಿಸಲಾದ ನಿಶಾನೆಃ**

ಇಲ್ಲ

**31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ.**

03-07-2026

ಪ್ರತ್ಯೇಕವಾಗಿ ತಯಾರಿಸಲಾದ ತೀರ್ಪನ್ನು ಘೋಷಿಸಿದ್ದು ಅಂತಿಮ ಆದೇಶ ಈ ಕೆಳಕಂಡಂತಿರುತ್ತದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮೇರೆಗೆ 1 ಮತ್ತು 2ನೇ ಆರೋಪಿತರನ್ನು ಅವರ ವಿರುದ್ಧ ಆರೋಪಿಸಲಾದ ಭಾ.ದಂ.ಸಂ. ಕಲಂ 324, 504, 506 ಸಹ ವಾಚಕ 34ರ ದಂಡನೀಯವಾದ ಅಪರಾಧಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆ-ಗೊಳಿಸಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಪ್ರಕಾರ ಆರೋಪಿತರ ಪರ ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಗಳು ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

ಮೇಲ್ಮನವಿ ಅವಧಿ ಮುಗಿದ ನಂತರ ಸ್ವತು ಪಟ್ಟಿ ಸಂ.197/2016ರಲ್ಲಿ ತೋರಿಸಲಾದ ಚಾಕುವನ್ನು ನಾಶಪಡಿಸುವುದು.

**31ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ.**